ನಿಮ್ಮೊಡನೆ

# ‘ಕಡ್ಡಾಯ ಶಿಕ್ಷಣ’ ಎಲ್ಲಿದೆ?

ಮಕ್ಕಳು ಶಾಲೆಯಿಂದ ಹೊರಗೆ ಉಳಿಯಲು ಕಾರಣಗಳು ಅನೇಕ. ಕುಟುಂಬಗಳ ವಲಸೆ ಇವುಗಳಲ್ಲಿ ಪ್ರಮುಖ. ಜೊತೆಗೆ ಪೋಷಕರ ನಿರಾಸಕ್ತಿ, ಆರ್ಥಿಕ ಸಮಸ್ಯೆಗಳು ಕೂಡ ಮಕ್ಕಳ ಕಲಿಯುವ ಹಕ್ಕನ್ನು ಕಸಿದುಕೊಳ್ಳುತ್ತವೆ. ಶಾಲೆಗೆ ಹೋಗಬೇಕಾದ ಮಕ್ಕಳು ಮನೆಯಲ್ಲಿನ ಹಸುಗೂಸುಗಳನ್ನು ಸಂಭಾಳಿಸಬೇಕಾದ ಪರಿಸ್ಥಿತಿಯೂ ಕೆಲವು ಕುಟುಂಬಗಳಲ್ಲಿ ಇರುತ್ತದೆ.

ಮಕ್ಕಳನ್ನು ಶಾಲೆಗೆ ಕರೆತರಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಆ ಯೋಜನೆಗಳು ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಜಾರಿಯಾದಂತೆ ಕಾಣಿಸುತ್ತಿಲ್ಲ. ಶಾಲೆಯಿಂದ ಹೊರಗುಳಿದ ಮಕ್ಕಳ ಕುರಿತಂತೆ ಶಿಕ್ಷಣ ಇಲಾಖೆ ನೀಡಿರುವ ಅಂಕಿಅಂಶಗಳು ಈ ಅನುಮಾನಕ್ಕೆ ಆಸ್ಪದ ಕಲ್ಪಿಸುವಂತಿವೆ. ಶಿಕ್ಷಣ ಇಲಾಖೆಯ ಪ್ರಕಾರ 6ರಿಂದ 14 ವರ್ಷ ವಯಸ್ಸಿನ 51,994 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಸಾಮಾಜಿಕ ಕಾರ್ಯಕರ್ತೆ ಕಾತ್ಯಾಯಿನಿ ಚಾಮರಾಜ್ ಅವರು ನ್ಯಾಯಾಲಯಕ್ಕೆ ಸಲ್ಲಿಸಿರುವ ಅಂಕಿ ಅಂಶಗಳ ಪ್ರಕಾರ, ಈ ಸಂಖ್ಯೆ 6,28,047.

ಕಾತ್ಯಾಯಿನಿ ಅವರು ತಮ್ಮ ಅಂಕಿ ಅಂಶಗಳಿಗೆ ಪೂರಕ ಮಾಹಿತಿ ನೀಡಿದ್ದಾರೆ. ‘2005–06ರಿಂದ 2011–12ರ ಅವಧಿಯಲ್ಲಿ 1ನೇ ತರಗತಿಗೆ 78,76,110 ಮಕ್ಕಳು ಪ್ರವೇಶ ಪಡೆದಿದ್ದಾರೆ. 2012–13ರ ಶೈಕ್ಷಣಿಕ ವರ್ಷದಲ್ಲಿ 72,48,063 ಮಕ್ಕಳು 2ರಿಂದ 8ನೇ ತರಗತಿಗಳಲ್ಲಿ ಓದುತ್ತಿದ್ದಾರೆ ಎಂದು ಸರ್ಕಾರ ಹೇಳುತ್ತಿದೆ. ಹಾಗಾದರೆ, ಉಳಿದ 6,28,047 ವಿದ್ಯಾರ್ಥಿಗಳು ಎಲ್ಲಿ ಹೋದರು’ ಎನ್ನುವ ಪ್ರಶ್ನೆ ಕಾತ್ಯಾಯಿನಿ ಅವರದು. ಶಾಲೆಗಳಿಂದ ಹೊರಬಿದ್ದ ಮಕ್ಕಳನ್ನು ಪತ್ತೆ ಹಚ್ಚಲು ಸರ್ಕಾರ ಅವೈಜ್ಞಾನಿಕ ಕ್ರಮ ಅನುಸರಿಸಿದೆ ಎನ್ನುವುದು ಅವರ ಆರೋಪ.

ಉಚಿತ ಮತ್ತು ಕಡ್ಡಾಯ ಶಿಕ್ಷಣ ಘೋಷಣೆಯ ‘ಮಕ್ಕಳ ಶಿಕ್ಷಣ ಹಕ್ಕು’ ಕಾಯ್ದೆ ಜಾರಿಯಲ್ಲಿರುವ ಸಂದರ್ಭಲ್ಲಿ, ಕಳೆದ 7 ವರ್ಷಗಳ ಅವಧಿಯಲ್ಲಿ ಶೇ 8ರಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ಎನ್ನುವ ಸಂಗತಿ ಆತಂಕ ಹುಟ್ಟಿಸುವಂತಹುದು. ಹಾಗೆ ನೋಡಿದರೆ ಶಿಕ್ಷಣ ಕ್ಷೇತ್ರಕ್ಕೆ ಸರ್ಕಾರ ಸಾಕಷ್ಟು ಪ್ರಾಮುಖ್ಯ ನೀಡುತ್ತಲೇ ಬಂದಿದೆ. ಪ್ರಸಕ್ತ ಬಜೆಟ್‌ನ ಶೇ 12ರಷ್ಟು ಮೊತ್ತ ಶಿಕ್ಷಣ ಕ್ಷೇತ್ರಕ್ಕೆ ಮೀಸಲಾಗಿದೆ. 1ನೇ ತರಗತಿಯ ಹೆಣ್ಣುಮಕ್ಕಳಿಗೆ ದಿನಕ್ಕೆ 2 ರೂಪಾಯಿ ಹಾಜರಾತಿ ಭತ್ಯೆ ನೀಡುವುದಾಗಿ ಸರ್ಕಾರ ಪ್ರಕಟಿಸಿದೆ. ಇಷ್ಟೆಲ್ಲ ಯೋಜನೆಗಳ ನಂತರವೂ ಶಾಲೆಗಳಿಂದ ದೊಡ್ಡ ಸಂಖ್ಯೆಯ ಮಕ್ಕಳು ಹೊರಗುಳಿದಿರುವುದನ್ನು ನೋಡಿದರೆ ಸರ್ಕಾರದ ಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಕಲಿಕೆಯಿಂದ ವಂಚಿತರಾದ ಮಕ್ಕಳ ಸಂಖ್ಯೆಯ ಕುರಿತಂತೆ ಶಿಕ್ಷಣ ಇಲಾಖೆ ಸಲ್ಲಿಸಿರುವ ಅಂಕಿಅಂಶಗಳ ಸಮರ್ಪಕತೆ ಬಗ್ಗೆ ನ್ಯಾಯಾಲಯ ಕೂಡ ಅಸಮಾಧಾನ ವ್ಯಕ್ತಪಡಿಸಿದೆ. ಲೆಕ್ಕಗಳು ಏನೇ ಇರಲಿ, ಶಾಲೆಯಿಂದ ದೂರವುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತನ್ನಿ ಎನ್ನುವ ನ್ಯಾಯಾಲಯದ ಸೂಚನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ.

2010ರ ಮಕ್ಕಳ ಗಣತಿಯ ಪ್ರಕಾರ 6ರಿಂದ 14 ವರ್ಷದೊಳಗಿನ 1,08,542 ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದರು. ರಾಜ್ಯದ 33 ಶೈಕ್ಷಣಿಕ ಜಿಲ್ಲೆಗಳ ಪೈಕಿ ರಾಯಚೂರು ವ್ಯಾಪ್ತಿಯಲ್ಲಿ ಅತಿ ಹೆಚ್ಚು ಮಕ್ಕಳು (9,119) ಶಾಲೆಯಿಂದ ಹೊರಗುಳಿದಿದ್ದರು. ನಂತರದ ಸ್ಥಾನಗಳಲ್ಲಿ ಬಿಜಾಪುರ (8560), ಯಾದಗಿರಿ (8218), ಗುಲ್ಬರ್ಗ (7897) ಜಿಲ್ಲೆಗಳಿದ್ದವು. ವಲಯ ಮಟ್ಟದಲ್ಲಿ– ಗುಲ್ಬರ್ಗ (40936), ಬೆಳಗಾವಿ (32025) ಹಾಗೂ ಬೆಂಗಳೂರು (23611) ಜಿಲ್ಲೆಗಳಲ್ಲಿ ಶಾಲೆಗಳಿಂದ ಹೊರಗುಳಿದಿರುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ.

ಮಕ್ಕಳು ಶಾಲೆಗೆ ದಾಖಲಾಗದೆ ಉಳಿಯಲು ಮತ್ತು ಅರ್ಧದಲ್ಲಿಯೇ ಶಾಲೆ ಬಿಡಲು ಅನೇಕ ಕಾರಣಗಳಿವೆ. ಕುಟುಂಬಗಳ ವಲಸೆ ಇವುಗಳಲ್ಲಿ ಪ್ರಮುಖ ಕಾರಣ. ಉದ್ಯೋಗ ಹುಡುಕಿಕೊಂಡು ಒಂದು ಕಡೆಯಿಂದ ಮತ್ತೊಂದು ಪ್ರದೇಶಕ್ಕೆ ಹೋಗುವ ಕುಟುಂಬಗಳ ಮಕ್ಕಳು ಶಾಲೆಯಿಂದ ಹೊರಗುಳಿಯುವ ಸಾಧ್ಯತೆಗಳು ಹೆಚ್ಚು. ಪೋಷಕರ ನಿರಾಸಕ್ತಿ, ಆರ್ಥಿಕ ಸಮಸ್ಯೆಗಳು ಕೂಡ ಮಕ್ಕಳ ಕಲಿಯುವ ಹಕ್ಕನ್ನು ಕಸಿದುಕೊಳ್ಳುತ್ತವೆ. ಶಾಲೆಗೆ ಹೋಗಬೇಕಾದ ಮಕ್ಕಳು ಮನೆಯಲ್ಲಿನ ಹಸುಗೂಸುಗಳನ್ನು ಸಂಭಾಳಿಸಬೇಕಾದ ಪರಿಸ್ಥಿತಿಯೂ ಕೆಲವು ಕುಟುಂಬಗಳಲ್ಲಿ ಇರುತ್ತದೆ. ಚಿಕ್ಕ ವಯಸ್ಸಿನಲ್ಲಿಯೇ ಹೆಣ್ಣುಮಕ್ಕಳಿಗೆ ಮದುವೆ ಮುಗಿಸುವ ಧಾವಂತವೂ ಅವರ ಕಲಿಕೆಯ ಅವಕಾಶಗಳನ್ನು ಇಲ್ಲವಾಗಿಸುತ್ತಿದೆ. ಕಲಿಯುವ ವಯಸ್ಸಿನ ಮಕ್ಕಳು ಹೋಟೆಲುಗಳಲ್ಲಿ, ಮದ್ಯದಂಗಡಿಗಳಲ್ಲಿ, ಗ್ಯಾರೇಜುಗಳಲ್ಲಿ ಕೆಲಸ ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕ.

ಸಮರ್ಪಕ ಶಿಕ್ಷಣ ಹೊಂದುವುದು ಎಲ್ಲ ಮಕ್ಕಳ ಹಕ್ಕು. ಕಡ್ಡಾಯ ಶಿಕ್ಷಣ ನೀಡಬೇಕಾದುದು ಸರ್ಕಾರದ ಕರ್ತವ್ಯ. ಲಕ್ಷಾಂತರ ಮಕ್ಕಳು ಶಾಲೆಯಿಂದ ಹೊರಗುಳಿಯುವುದು ವ್ಯವಸ್ಥೆಯ ವೈಫಲ್ಯದ ಸೂಚಕ ಆಗಿರುವಂತೆಯೇ ಸಂವಿಧಾನ ಕೊಡಮಾಡಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆಯ ಉದಾಹರಣೆಯೂ ಹೌದು. ಯೋಜನೆಗಳ ಪ್ರಕಟಣೆಯಲ್ಲಿ ಹುಮ್ಮಸ್ಸು ತೋರುವ ಸರ್ಕಾರ, ಅವುಗಳ ಅನುಷ್ಠಾನದಲ್ಲೂ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ.

■ ರಘುನಾಥ ಚ.ಹ.



ಈಶ್ವರ